

ಆರ್ಯ ಕಣಿವೆಯಲ್ಲಿ ಕಂಡ ಒಬ್ಬ ವ್ಯಕ್ತಿ

ಅರ್ಥವಾಗದೆ ನಾವು ಮೂವರೂ ಒಬ್ಬರ ಮುಖವನ್ನೊಬ್ಬರು ನೋಡಿಕೊಂಡೆವು. ಮತ್ತೆ ಅದೇ ಶಬ್ದ ಕೇಳಿಸಿತು – ಯಾರೋ ಚಪ್ಪಾಳೆ ತಟ್ಟಿ ಕರೆದಂತೆ...

ಸುತ್ತಲೂ ಕಣ್ಣು ಹಾಯಿಸಿ ಹುಡುಕಾಡಿದೆವು. ಯಾರೂ ಕಾಣಲಿಲ್ಲ. ಆದರೆ ಕೆಲವೇ ಕ್ಷಣಗಳಲ್ಲಿ ನಮ್ಮ ಕೂಗಿನ ಪ್ರತಿಧ್ವನಿ ನಿಂತು ಮೌನ ಆವರಿಸಿದಂತೆ ಮತ್ತೊಮ್ಮೆ ಅದೇ ಚಪ್ಪಾಳೆ. ಈ ಬಾರಿ ಸ್ಪಷ್ಟವಾಗಿ ಕೇಳಿಸಿತ್ತು. ವಿಹಾರದ ಎಡಕ್ಕೆ ಇದ್ದ ಪರ್ವತದ ಕಡೆಯಿಂದ ಯಾರೋ ಚಪ್ಪಾಳೆ ತಟ್ಟಿ ನಮ್ಮ ಗಮನ ಸೆಳೆಯುತ್ತಿರುವುದು ಖಾತ್ರಿಯಾಯಿತು. ಆ ಪರ್ವತದ ಮೈಮೇಲೆಲ್ಲ ದೃಷ್ಟಿ ಹಾಯಿಸಿದೆವು. ಸುಮಾರು 300 ಅಡಿಗಳ ಎತ್ತರದಲ್ಲಿ ಕೆಂಪು ದಿರಿಸು ತೊಟ್ಟ, ಬೋಡುತಲೆಯ ಬೌದ್ಧ ಭಿಕ್ಕು ಒಬ್ಬರು ನಿಂತು ನಮ್ಮತ್ತಲೇ ಕೈ ಬೀಸಿ ಗಮನ ಸೆಳೆಯುತ್ತಿದ್ದರು. ನಾವೂ ಕೈ ಎತ್ತಿ ಉತ್ತರಿಸಿದೆವು. ತಕ್ಷಣ ಅವರು ‘ಕೂಗ ಬೇಡಿ. ಸುಮ್ಮನಿರಿ’ ಎಂದು ಕೈಯಲ್ಲಿಯೇ ಸಂಜ್ಞೆ ಮಾಡಿ, ‘ನಾನು ನಿಮ್ಮಲ್ಲಿಗೆ ಬರುತ್ತಿದ್ದೇನೆ, ಕಾಯಿರಿ’ ಎಂಬ ಸೂಚನೆಯಿತ್ತರು. ನೋಡ ನೋಡುತ್ತಿದ್ದಂತೆ, ಅವರು ಬಿರಬಿರನೆ ಇಳಿಯತೊಡಗಿದ್ದರು. ನಮಗೋ ನಾವು ಮಕ್ಕಳಂತೆ ಕೂಗಿದ್ದಕ್ಕೆ ನಾಚಿಕೆಯಾಗಿದ್ದರೂ ನಮ್ಮ ಕುತೂಹಲ ತಣಿಸಲು ಯಾರೋ ಸಿಕ್ಕಿದರಲ್ಲ ಎಂದು ಖುಷಿಯಾಗಿ ಸಂತಸಗೊಂಡೆವು.

ಸುಮಾರು ಹತ್ತು ನಿಮಿಷಗಳಲ್ಲಿ ಆ ಭಿಕ್ಕು ಇಳಿದು ವಿಹಾರದ ಬಳಿ ಬಂದಿದ್ದರು. ನಾವು ನಗುತ್ತ ಕೈ ಜೋಡಿಸಿ ನಮಸ್ಕರಿಸಿ, ಆಂಗ್ಲ ಭಾಷೆಯಲ್ಲಿ ನಮ್ಮ ಕಿರುಪರಿಚಯ ಮಾಡಿಕೊಳ್ಳುತ್ತಿದ್ದಂತೆ ಅವರ ಪ್ರತ್ಯುತ್ತರದಿಂದ ಅವರಿಗೆ ಸ್ಪಷ್ಟವಾಗಿ ಆಂಗ್ಲ ಭಾಷೆ ತಿಳಿದಿದೆಯೆಂದು ಅರಿವಾಯಿತು. ಅವರು ನಮ್ಮೆಲ್ಲರಿಗೂ ಕೈಯೆತ್ತಿ ನಮಸ್ಕರಿಸಿ,

“ನನ್ನ ಹೆಸರು ದಿಂಗ್ಸೆ. ದಯಾಮ ದಿಂಗ್ಸೆ. ಈ ವಿಹಾರದ ಮೇಲ್ವಿಚಾರಣೆ ನನ್ನದೆ. ಅಲ್ಲಿನ ಶಾಲೆಯಲ್ಲಿ ಮಾಸ್ತರಾಗಿದ್ದೇನೆ. ಆ ಬೆಟ್ಟದಾಚೆ ಇರುವ ಒಂದು ಹಳ್ಳಿಯಲ್ಲಿನ ಒಬ್ಬ ಮುದುಕ ಪ್ರಸಿದ್ಧ ನಾಟಿವೈದ್ಯ. ಆತನಿಗೆ ಇಲ್ಲಿನ ಹಲವು ಔಷಧಿ ಸಸ್ಯಗಳ ಉಪಯೋಗ ತಿಳಿದಿದೆ. ಆತನ ಬಳಿ